ಇವತ್ತು ಸದನದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ. ನಾನು ಈ ಸದನದಲ್ಲಿ ಭರವಸೆ ಕೊಡುವುದೇನೆಂದರೆ, ತುರ್ತಾಗಿ ಪೊಲೀಸ್ ಕಮಿಷನರ್‌ರವರಿಂದಲೂ ಮೌಖಿಕವಾಗಿ ಒಂದು ವರದಿಯನ್ನು ತರಿಸಿ ಸಂಬಂಧ ಪಟ್ಟವರ ಮೇಲೆ ತೆಗೆದುಕೊಳ್ಳುತ್ತೇವೆ.

ಅಭಯಚಂದ್ರ. ಜೈನ್‌ರವರೆ, ಶಾಲಾ ಮಕ್ಕಳ ಮೇಲೆ ಈ ರೀತಿ ಆಗಬಾರದು. ಅದು ಅಲ್ಪ ಸಂಖ್ಯಾತರು, ಬಹು ಸಂಖ್ಯಾತರು ಎಂಬ ಪ್ರಶ್ನೆ ಅಲ್ಲ. ಶಾಲಾ ಮಕ್ಕಳು ಎಳೆ ಮಕ್ಕಳು ಇವರ ಮೇಲೆ ಆಗಬಾರದು. ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ಶ್ರೀ. ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ನಾನೇ ಖುದ್ದಾಗಿ ಆಸ್ಪತ್ರೆಗೆ ಹೋಗಿ ಲಾಠಿ ಪೆಟ್ಟು ತಿಂದಿರುವ ಮಕ್ಕಳನ್ನು ನೋಡಿ ಬಂದಿದ್ದೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಹೇಳಿದ್ದಾರೆ.

4) ವಿಷಯ :ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಮಾಡುವಂಥ ದಲಿತ ಕೇರಿಗಳಿಗೆ ಹಣವನ್ನು ಮಂಜೂರು ಮಾಡುವ ಬಗ್ಗೆ

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಶೂನ್ಯ ವೇಳೆಯಲ್ಲಿ ಹಾಸನ ಜಿಲ್ಲೆಗೆ ಸಂಬಂದಪಟ್ಟಂತೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಸಂಬಂಧಪಟ್ಟಂತೆ ಇವತ್ತು ಉತ್ತರ ಕೊಡಿಸುತ್ತೇನೆಂದು ತಿಳಿಸಿದ್ದೀರಿ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಕಳುಹಿಸಿದ್ದಾರೆ. ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ ಕೆ. ರಾಜು (ರಾಮನಗರ) : ಮಾನ್ಯ ಅಧ್ಯಕ್ಷರೆ, ರಾಮನಗರದಲ್ಲಿ ಆನೆಗಳ ಹಾವಳಿ ಹೆಚ್ಚಿದೆ. ಇವತ್ತು ಬೆಳಿಗ್ಗೆ 16 ಹಳ್ಳಿಗಳಲ್ಲಿ ಹತ್ತಾರು ಕಡೆಗಳಲ್ಲಿ ಆನೆಗಳ ದಾಳಿಯಿಂದ ಬಹಳ ನಷ್ಟವಾಗುತ್ತಿದೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಯವರನ್ನು ಸಭೆಗೆ ಕರೆಸಬೇಕು. ಇಲ್ಲಿ 8–10 ಆನೆಗಳು ಬಂದು ದಾಳಿ ಮಾಡಿದೆ.

ಅಧ್ಯಕ್ಷರು : ಈಗ ಮಾನ್ಯ ಪ್ರಕಾಶ್‌ರವರನ್ನು ಕರೆದಿದ್ದೇನೆ. ತಾವು ಈ ರೀತಿ ಎದ್ದು ನಿಂತು ಹೇಳುವುದು ಸರಿಯಲ್ಲ, ಕುಳಿತುಕೊಳ್ಳಿ.

ಶ್ರೀ ಕೆ. ರಾಜು : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಯವರನ್ನು ಕರೆಸಿ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂದೀಖಾನೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಪ್ರವಾಸ ಹೋದಾಗ ಅನೇಕ ಸಂಘಟನೆಗಳು, ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು, ಹೀಗೆ ಅನೇಕರು ನನಗೆ ಪತ್ರವನ್ನು ನೀಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸ ಮಾಡುವಂಥ ದಲಿತ ಕೇರಿಗಳಿಗೆ ಹಣವನ್ನು ಮಂಜೂರು ಮಾಡಿ ಎಂದು ಕೇಳಿದ್ದಾರೆ. ಮಂತ್ರಿಗಳ discretionary quota ದಲ್ಲಿ ನಾನು ಹೆಚ್ಚು ಹಣವನ್ನು ಇಡೀ ರಾಜ್ಯದಲ್ಲಿ ಬಿಡುಗಡೆ ಮಾಡಿದ್ದೇನೆ. ಆ ವಿಚಾರದಲ್ಲಿ ನಿಮ್ಮ ಕ್ಷೇತ್ರಕ್ಕೂ ಹಣವನ್ನು ಬಿಡುಗಡೆ ಮಾಡಿದ್ದೇನೆ. ನಾವು ಯಾವುದೇ ವ್ಯಕ್ತಿಗಳಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳು ಕೆ.ಟಿ.ಪಿ.ಪಿ. ಆಕ್ಟ್ ಪ್ರಕಾರ ಕಾನೂನು ಚೌಕಟ್ಟಿನಲ್ಲಿ ಟೆಂಡರ್‌ಅನ್ನು ಮಾಡಿ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಾರೆ.

ಶ್ರೀ ಹೆಚ್.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ಹಕ್ಕುಚ್ಯುತಿಯಾಗುತ್ತದೆ. ಯಾವುದೇ ವ್ಯಕ್ತಿಗಳ ಹೆಸರಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ದಿನಾಂಕ 19–01–2011 ರಂದು ಮಾನ್ಯ ಸಚಿವರಿಗೆ ಹಣ ಬಿಡುಗಡೆ ಮಾಡಿ ಎಂದು ಒಂದು ಮನವಿಯನ್ನು ಕೊಟ್ಟಿದ್ದೆನು. ಅದಕ್ಕೆ ಅವರು ಹಣ ಇಲ್ಲ ಎಂದು ಹೇಳಿದ್ದರು. ಅದಾದ ನಂತರ 5ನೇ ತಿಂಗಳಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ಯಾರ ಹೆಸರಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದರೆ, ರುದ್ರೇಶ್‌ಗೌಡರು, ಬೇಲೂರು ಎಂ.ಎಲ್.ಎ. ಇವರಿಗೆ ಬಿಡುಗಡೆ ಮಾಡುತ್ತಾರೆ, ಪುಟ್ಟೇಗೌಡರು, ಚನ್ನರಾಯಪಟ್ಟಣ

ಎಂ.ಎಲ್.ಎ. ಇವರಿಗೆ ಬಿಡುಗಡೆ ಮಾಡುತ್ತಾರೆ. ತಾಲ್ಲೂಕು ಪಂಚಾಯಿತಿಯ ಮಾಜಿ ಸದಸ್ಯೆ ನಾಗರತ್ನ ಎನ್ನುವವರಿಗೆ 77 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಇದು ನನ್ನ ಹಕ್ಕುಚ್ಯುತಿ ಆಗುವುದಿಲ್ಲವೇ ? ಇದು ಗೌರವ ಕೊಡುವಂಥಾದ್ದೇ ? ರೋಡುಗಳು ಗುಂಡಿ ಬಿದ್ದಿವೆ, ಅದಕ್ಕೆ ಹಣ ಕೊಡಿ ಎಂದು ಪಿ.ಡಬ್ಲ್ಯು.ಡಿ. ಮಿನಿಸ್ಟರ್‌ರವರನ್ನು ಅಂಗಲಾಚಿ ಬೇಡುತ್ತಿದ್ದೇವೆ. ಅದಕ್ಕೆ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ಇವರು ತಾಲ್ಲೂಕು ಪಂಚಾಯಿತಿಗೆ ನಿಂತು ಸೋತಿದ್ದ ಒಬ್ಬರಿಗೆ 77 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ ಎಂದರೆ ಇದರ ಅರ್ಥವೇನು ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನನಗೆ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳ ಬಗ್ಗೆ ಗೌರವವಿದೆ. ಇಲ್ಲಿರುವವರು ವಿಧಾನಸಭಾ ಕ್ಷೇತ್ರದ ಶಾಸಕರು. ಒಬ್ಬರು ತಾಲ್ಲೂಕು ಪಂಚಾಯಿತಿಯ ಚುನಾವಣೆಗೆ ನಿಂತು ಠೇವಣಿ ಕಳೆದುಕೊಂಡಿದ್ದಾರೆ. ಅವರು 300 ಅಥವಾ 500 ಓಟುಗಳನ್ನು ತೆಗೆದುಕೊಂಡಿರಬಹುದು. ಅವರು 77 ಲಕ್ಷ ರೂಪಾಯಿಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡು ಬರುತ್ತಾರೆ. ಎಂದರೆ ನಾವು ಶಾಸಕರಾಗಿ ಏಕಿರಬೇಕು ? ಠೇವಣಿ ಕಳೆದುಕೊಂಡಂಥವರು 77 ಲಕ್ಷ ರೂಪಾಯಿಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡು ಬರುವುದಾದರೆ ಇವರು ಶಾಸಕರಾಗಿ ಏಕಿರಬೇಕು ? ಇಲ್ಲದಿದ್ದರೆ ಒಂದು ಕೆಲಸ ಮಾಡಿಬಿಡಿ. ಬಿ.ಜೆ.ಪಿ.ಯಲ್ಲಿ ಯಾರ್ಯಾರ ಹೆಸರಿರುತ್ತದೋ, ಅವರ ಹೆಸರಿಗೆಲ್ಲ 77 ಲಕ್ಷ, 50 ಲಕ್ಷ, 60 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಒಂದು ಕಾಯಿದೆ ಮಾಡಿ ಅವರಿಗೇ ಹಣವನ್ನು ಕೊಟ್ಟುಬಿಡಿ. ಎಂ.ಎಲ್.ಎ.ಗಳಾದ ನಾವು ಸುಮ್ಮನೆ ಇಲ್ಲಿಗೆ ಬರುತ್ತೇವೆ, ನೀವು ಏನು ಹೇಳುತ್ತೀರೋ ಅದನ್ನು ಇಲ್ಲಿ ಚರ್ಚೆ ಮಾಡಿಬಿಟ್ಟು ನಾವು ಹೊರಟು ಬಿಡುತ್ತೇವೆ. ದಯಮಾಡಿ ಇದು ಆಗಬಾರದು. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ, ನಿಮ್ಮ ಹತ್ತಿರ ಇದನ್ನು ಯಾರು ಬರೆಸಿದ್ದಾರೋ ಗೊತ್ತಿಲ್ಲ. ಏಕೆಂದರೆ, ನೀವು ಆ ರೀತಿ ಮಾಡುವವರಲ್ಲ. ಯಾವ ಉದ್ದೇಶದಿಂದ, ಕೈತಪ್ಪಿ ಮಾಡಿದ್ದೀರೋ, ದಯಮಾಡಿ ಕೂಡಲೆ ಅದನ್ನು ಹಿಂತೆಗೆದುಕೊಳ್ಳಬೇಕು. ಆ ಅಧಿಕಾರವನ್ನು ಎಂ.ಎಲ್.ಎ. ರವರಿಗೆ ಕೊಡಿ. ಇಲ್ಲದಿದ್ದರೆ ಅವರು ಎಂ.ಎಲ್.ಎ. ಆಗಿ ಏಕಿರಬೇಕು ? ಎಂ.ಎಲ್.ಎ.ಗಳು ಬೇಡ, ನೀವು ಸುಮ್ಮನಿದ್ದುಬಿಡಿ, ನಾವೇ ಕಾರ್ಯಕರ್ತರ ಕೈಯಲ್ಲಿ ಹಂಚಿಸುತ್ತೇವೆ ಎಂದರೆ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಎ. ನಾರಾಯಣಸ್ವಾಮಿ : ಯಾವುದೇ ಒಬ್ಬ ವ್ಯಕ್ತಿಗೆ ಹಣವನ್ನು ನಾವು ಬಿಡುಗಡೆ ಮಾಡುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿರುತ್ತೇವೆ. ಅನೇಕ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ, ಇಡೀ ರಾಜ್ಯದಲ್ಲಿ ಹಣವನ್ನು ಬಿಡುಗಡೆ ಮಾಡಿರುತ್ತೇನೆ. ಯಾವುದೇ ವ್ಯಕ್ತಿಗೆ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆ ನಮ್ಮ ಸರ್ಕಾರದಲ್ಲಿಲ್ಲ.

ಶ್ರೀ ಹೆಚ್.ಎಸ್. ಪ್ರಕಾಶ್ : 77 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಹೆಸರು ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಅದನ್ನು ಓದಿಬಿಡುತ್ತೇನೆ. ಕೆ.ಎನ್. ಪ್ರಸನ್ನಕುಮಾರ್, ಅಧ್ಯಕ್ಷರು, ಅರಸೀಕೆರೆ ಕ್ಷೇತ್ರ ಎಂದು ಇದೆ. ಇವರು ಯಾವ ಅಧ್ಯಕ್ಷರು ಎಂದರೆ ಬಿ.ಜೆ.ಪಿ.ಯ ಅಧ್ಯಕ್ಷರು. ಅವರು 23 ಲಕ್ಷ ರೂಪಾಯಿಗಳಿಗೆ ಮನವಿ ಮಾಡಿದ್ದರೆ, ಅವರಿಗೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದೇ ರೀತಿ, ಬೇಲೂರು ಶಾಸಕರಾದ ವೈ.ಎನ್. ರುದ್ರೇಶ್‌ಗೌಡರು, ಪುಟ್ಟೇಗೌಡರು ಎಂದು ಇದೆ. ನಂತರ ನಾಗರತ್ನ, ಮಾಜಿ ತಾಲ್ಲೂಕು ಪಂಚಾಯಿತಿ ಸಮಿತಿ ಸದಸ್ಯರು ಇವರಿಗೆ 77 ಲಕ್ಷ ರೂಪಾಯಿಗಳು ಎಂದು ಇದೆ. ಇಲ್ಲಿ ನಮ್ಮ ಹತ್ತಿರ ಸರ್ಕಾರಿ ಆದೇಶವಿದೆ, ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಇಲ್ಲ ಎಂದು ಹೇಳುತ್ತಿದ್ದಾರಲ್ಲ, ನೀವು ನೋಡಿ ಅಧ್ಯಕ್ಷರೆ.

ಶ್ರೀ ಎ. ನಾರಾಯಣಸ್ವಾಮಿ : ಯಾರೋ ಪ್ರಸ್ತಾವನೆಯನ್ನು ಮಾಡಿರುತ್ತಾರೆ, ಬೇಡಿಕೆಯನ್ನಿಟ್ಟಿರುತ್ತಾರೆ. ಆದರೆ ಯಾವುದೇ ವ್ಯಕ್ತಿಗೆ ನಾವು ಹಣವನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಿದ್ದೇನೆ. ತಮ್ಮ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ, ಆದರೆ ವ್ಯಕ್ತಿಗೆ ಬಿಡುಗಡೆ ಮಾಡುವ ಪದ್ಧತಿಯೇ ನಮ್ಮಲ್ಲಿಲ್ಲ.

ಅಧ್ಯಕ್ಷರು : ಪ್ರಸ್ತಾವನೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಒಂದು ಕೆಲಸ ಮಾಡುತ್ತೇನೆ, ನಾನು ನಮ್ಮ ಊರಿನಲ್ಲಿರುವ ಎಲ್ಲರ ಕೈಯಲ್ಲೂ ಪ್ರಸ್ತಾವನೆ ಕೊಡಿಸುತ್ತೇನೆ, ದಯಮಾಡಿ ಅದಕ್ಕೆ ಮಾಡಿಕೊಡಲು ಹೇಳಿ. ಎಲ್ಲೆಲ್ಲಿ ನಮ್ಮವರು ಸೋತಿದ್ದಾರೆ, ಎಲ್ಲೆಲ್ಲಿ ನಮ್ಮ ಜೆ.ಡಿ.(ಎಸ್)ನ ಮಾಜಿ ಎಂ.ಎಲ್.ಎ.ಗಳಿದ್ದಾರೆ, ಅವರೆಲ್ಲರ ಕಡೆಯಿಂದ ಪ್ರಸ್ತಾವನೆ ಕಳುಹಿಸಿ ಕೊಟ್ಟುಬಿಡುತ್ತೇನೆ,

ಹಣ ಬಿಡುಗಡೆ ಮಾಡುವುದಕ್ಕೆ ಹೇಳಿಬಿಡಿ. ದಯಮಾಡಿ ಈ ರೀತಿ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಅಧ್ಯಕ್ಷರೆ, ಶಾಸಕರ ಹಿತ ಕಾಪಾಡುವುದು ನಿಮಗೆ ಸೇರಿದೆ. ತಾವು ದಯಮಾಡಿ ಇಂಥವುಗಳಿಗೆ ಅವಕಾಶ ಕೊಡಬಾರದು ಎಂದು ನಿಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಪ್ರಕಾಶ್ : ಮಾಜಿ ತಾಲ್ಲೂಕು ಪಂಚಾಯಿತಿಯ ಸದಸ್ಯರು ಮನವಿ ಕೊಟ್ಟಾಗ, ಅದರಲ್ಲಿ ಶಾಸಕನಾದ ನನ್ನನ್ನು ಎಷ್ಟು ಹೊಗಳಿದ್ದಾರೆ ಎಂದರೆ, ಮೂರು ಬಾರಿ ಆಯ್ಕೆಯಾದಂಥ ಶಾಸಕರು ಮೂರು ಕಾಸಿನ ಕೆಲಸ ಮಾಡಿಲ್ಲ, ಕ್ಷೇತ್ರವನ್ನು ಸುತ್ತಿಲ್ಲ. ಪರಿಶಿಷ್ಟ ಪಂಗಡಗಳ ಜನಾಂಗದವರು ಇರುವಲ್ಲಿಗೆ ಹೋಗಿಲ್ಲ ಎಂದು ಹೇಳಿ ಅವರು ಲೆಟರ್ ಕೊಟ್ಟರೆ, ಅದರ ಮೇಲೆ ನೀವು ಆದೇಶ ಮಾಡುತ್ತೀರಲ್ಲ, ಇದು ಒಬ್ಬ ಶಾಸಕನಿಗೆ ಹಕ್ಕುಚ್ಯುತಿ ತಂದಿಲ್ಲವೇ ? ನಾವು ಇಲ್ಲಿ ಗೌರವವಾಗಿ ಇರಬೇಕೇ ? ಸಭಾ ನಾಯಕರೂ ಇಲ್ಲೇ ಇದ್ದಾರೆ, ಅವರು ಹೇಳಬೇಕು. ಅವರಿಗೆ ಕಾನೂನಿನ ಬಗ್ಗೆ ಹೆಚ್ಚಿನ ಅರಿವಿದೆ. ಈ ರೀತಿ, ಒಬ್ಬ ಶಾಸಕನ ಮಾನ ಮರ್ಯಾದೆಯನ್ನು ಬೀದಿಯಲ್ಲಿ ಹರಾಜು ಹಾಕಿದವರ ಪತ್ರದ ಮೇಲೆ ನೀವು ಲಿಖಿತವಾಗಿ ಬರೆದುಕೊಡುತ್ತೀರಲ್ಲ. ಇವರಿಗೆ 77 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಹೇಳಿದವರು ಯಾರು ? ಏನೆಂದು ಬರೆದಿದ್ದಾರೆ ಎಂದರೆ, ಕೆ.ಪಿ. ನಾಗರತ್ನ, ಕದಳಿ ಜಿಲ್ಲಾ ಪಂಚಾಯಿತಿಗೆ 2010ರಲ್ಲಿ ಸ್ಪರ್ಧಿಸಿ ಸೋತಿದ್ದರೂ ಕೂಡ ಅವರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಾಲೋನಿಗೆ ಮೂಲಭೂತ ಸೌಕರ್ಯ ಅಗತ್ಯವಿರುವುದನ್ನು ಮನಗಂಡು, ಅವರ ಬಗ್ಗೆ ಬಹಳ ಅನುಕಂಪ ತೋರಿಸಿ, ಸೋತಾದ ಮೇಲೆ ಅವರು ಕ್ಷೇತ್ರದ ಪ್ರವಾಸ ಮಾಡಿದರಂತೆ. ಮೂರು ಬಾರಿ ಗೆದ್ದಿದ್ದರೂ ಕೂಡ, ಶಾಸಕರಾದ ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಪರಿಶಿಷ್ಟ ಜಾತಿಯ ಕಾಲೋನಿಗೆ ಒಂದು ನಯಾ ಪೈಸೆಯ ಅನುದಾನವನ್ನೂ ತಂದಿರುವುದಿಲ್ಲ. ಅಲ್ಲದೇ, 77 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಕ್ಕೆ ನಾನು ಅವರಿಗೆ ಕಿರುಕುಳ ಕೊಡುತ್ತಿದ್ದೇನಂತೆ. ಇದು ಯಾವ ನ್ಯಾಯ ಸ್ವಾಮಿ ? ಯಾವ ರೀತಿ ಇದನ್ನು ಆದೇಶ ಮಾಡುತ್ತಾರೆ? ನಾವು ಯಾವ ರೀತಿ ಕೆಲಸ ಮಾಡಬೇಕು ದಯಮಾಡಿ ನೀವೇ ಹೇಳಿ. ನಾನು ಬಹಳಷ್ಟು ತಾಳ್ಮೆ ಇರುವಂಥ ಮನುಷ್ಯ. ಇದನ್ನು ನನಗೆ ಸಹಿಸಲೇ ಆಗುತ್ತಿಲ್ಲ. ಆಮೇಲೆ ಆಕೆಯ ಗಂಡ ಅದೇ ಇಲಾಖೆಗೆ ಡೆಪ್ಯುಟೇಷನ್ ಮೇಲೆ ಹೋಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಮೇಷ್ಟ್ರು ಕೆಲಸ ಮಾಡಿ ಎಂದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಆಫೀಸ್ ಸೂಪರಿಂಟೆಂಡೆಂಟ್ ಆಗುತ್ತೇನೆ ಎನ್ನುತ್ತಾರೆ. ಮಾನ್ಯ ಅಧ್ಯಕ್ಷರೆ, ಇದನ್ನು ಹಕ್ಕುಚ್ಯುತಿಗೆ ಹಾಕಬೇಕಾಗುತ್ತದೆ.

ಶ್ರೀ ಹೆಚ್.ಎಸ್.ಪ್ರಕಾಶ್ : ದಯಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಏನಿದೆ, ಅದರಲ್ಲೇ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಈಗಲೇ ಮಾಡಬೇಕು. ಯಾವುದೋ ಒಂದು ಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಕಡಿಮೆ, ಅಲ್ಲಿ 23 ಲಕ್ಷ ರೂಪಾಯಿಗಳ ಕೆಲಸ ಬೇಕಾಗಿಲ್ಲ ಎಂದು ಜಿಲ್ಲಾಧಿಕಾರಿ ಹೇಳಿದರೂ ಕೂಡ ಈ ರೀತಿ ಬರೆದು ಕಳುಹಿಸಿದ್ದಾರೆ. ಈ ಊರುಗಳು ಎಲ್ಲೆಲ್ಲಿವೆ ಎಂದು ಇವರು ಹೇಳಲಿ, ಈ ಹಳ್ಳಿಗಳು ಹಾಸನ ತಾಲ್ಲೂಕಿನಲ್ಲಿವೆಯೇ ಎಂದು ಹೇಳಲಿ. ಒಬ್ಬ ಸರ್ಕಾರಿ ಅಧಿಕಾರಿಯ ಹೆಂಡತಿಗೇ ಇದನ್ನು ಬರೆದು ಕೊಡುತ್ತಾರೆ.

ಅಧ್ಯಕ್ಷರು : ಅವರು ತೋರಿಸುತ್ತಿರುವ ಪತ್ರ ಏನಿದೆ, ಅದರ ಮೇಲೆ ನೀವು ಒಂದು ರಿಪೋರ್ಟ್ ತರಿಸಿ, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಶಾಸಕರ ಮೇಲೆ ಏಕೆ ಹೀಗೆ ಮಾಡುವುದು ?

ಶ್ರೀ ಎ. ನಾರಾಯಣಸ್ವಾಮಿ : ಅದು ಇಲಾಖೆಯಿಂದ ಆಗಿರುವುದಲ್ಲ, ಖಾಸಗಿಯಾಗಿ ಆಗಿರುವುದು.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಒಬ್ಬ ಶಾಸಕರ ಮೇಲೆ ಖಾಸಗಿಯಾಗಿಯೂ ಹಾಗೆ ಬರೆಯುವುದು ಸರಿಯಲ್ಲ, ಅದನ್ನು ಹಕ್ಕುಚ್ಯುತಿಗೆ ಹಾಕಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಇದನ್ನು ದಯಮಾಡಿ ಹಕ್ಕುಚ್ಯುತಿಗೆ ಹಾಕಿ. ಒಬ್ಬ ಪತ್ರಿಕೆಯವರು ಅಥವಾ ಟಿ.ವಿ. ಮಾಧ್ಯಮದವರು ಬರೆದರೆ ಅದನ್ನು ಹಕ್ಕುಚ್ಯುತಿಗೆ ಹಾಕುತ್ತೀರಿ. ಆದರೆ ವಿರೋಧ ಪಕ್ಷದ ಶಾಸಕರು ಪ್ರಸ್ತಾಪ ಮಾಡಿದರೆ ನೀವು ಅದನ್ನು ಹಕ್ಕುಚ್ಯುತಿಗೆ ಕೊಡುವುದಿಲ್ಲ.

ಅಧ್ಯಕ್ಷರು : ನೀವು ಅದನ್ನು ಇನ್ನೂ ಬರೆದುಕೊಟ್ಟಿಲ್ಲವಲ್ಲಾ ?

ಶ್ರೀ ಹೆಚ್.ಡಿ. ರೇವಣ್ಣ : ಈಗ ಪ್ರಸ್ತಾಪ ಮಾಡಿದ್ದೇವೆ. ಅದನ್ನು ಈ ಪತ್ರದ ಜೊತೆಗೇ ಬರೆದುಕೊಡುತ್ತೇವೆ. ದಯಮಾಡಿ ಹಕ್ಕುಚ್ಯುತಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಬರೆದುಕೊಡಿ, ನೋಡೋಣ. ಅವರು ಬರೆದುಕೊಡಲಿ, ನಾವು ಅದರ ಕಂಟೆಂಟ್ಸ್ ನೋಡಬೇಕಲ್ಲ ? I must see the contents.

6) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2012ರ ಜನವರಿ 30 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ (ಹಾವೇರಿ) : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

7) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳು ಇವೆಯಲ್ಲ ?

ಅಧ್ಯಕ್ಷರು : ಅವರು ಭಾಷಣವನ್ನು ಪ್ರಾರಂಭ ಮಾಡಿ ಬಿಟ್ಟಿದ್ದಾರೆ, ಅವರು ಹೆಚ್ಚು ಹೊತ್ತು ಮಾತನಾಡುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ನಾನಾಗಿಯೇ ಎದ್ದುನಿಂತಿಲ್ಲ, ಅಧ್ಯಕ್ಷರು ಕರೆದಿದ್ದಾರೆ. ನಾನು ಮಾತನಾಡಿದ ಮೇಲೆ ನೀವು ಪ್ರಸ್ತಾಪ ಮಾಡಿ.